ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, "2005ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ:

"2005ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ವಿಷಯ: ಸಹಕಾರಿ ಸಕ್ಕರೆ ಕಾರ್ಖಾನೆಗಳು ಅಕ್ರಮ ವ್ಯವಹಾರಗಳಿಂದ ನಷ್ಟ ಅನುಭವಿಸುತ್ತಿರುವ ಬಗ್ಗೆ.

ಉಪಾಧ್ಯಕ್ಷರು : ಮಾನ್ಯ ಈಶ್ವರಪ್ಪನವರು ಇಲ್ಲ, ಗಮನ ಸೆಳೆಯುವ ಸೂಚನೆ ಇದೆ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು) : ಸನ್ಮಾನ್ಯ ಉಪಾಧ್ಯಕ್ಷರೆ, ಈಗ ಅರ್ಧ ಗಂಟೆ ಕಾಲಾವಧಿ ಚರ್ಚೆ ಇತ್ತು, ಅದನ್ನು ಬಿಟ್ಟು ಮುಂದೆ ಹೋದಿರಿ. ದಯಮಾಡಿ ಕಾರ್ಯಕಲಾಪದ ಪಟ್ಟಿಯಂತೆ ವಿಷಯ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಉಪಾಧ್ಯಕ್ಷರು : ಅದರಲ್ಲಿದೆ ಇದು. ಗಮನ ಸೆಳೆಯುವ ಸೂಚನೆಗಳು.....

ಶ್ರೀ ಎ.ಟಿ.ರಾಮಸ್ವಾಮಿ : ಇದೆ. ಮತ್ತೆ ಹಿಂದಕ್ಕೆ ಹೋಗಿ ಬಿಡುತ್ತೀರಿ. ನಿನ್ನೆ ದಿವಸವೂ ಹಾಗೆಯೇ ಆಗಿ ಬೇರೆ ವಿಷಯಗಳು ಚರ್ಚೆ ಆಯಿತು.

ಉಪಾಧ್ಯಕ್ಷರು : ಈ ಸಬ್ಜೆಕ್ಟ್ ಇದೆ. 8ನೇ ಕಾಲಿಂಗ್ ಅಟೆನ್‌ಷನ್ ಇದೆ.

ಶ್ರೀ ಎ.ಟಿ.ರಾಮಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೆ, ಸ್ವಲ್ಪ ಈ ಕಡೆ ಕೇಳಬೇಕು. ಕಳೆದ ಅಧಿವೇಶನದಿಂದ ನಾನು ಪ್ರಯತ್ನ ಮಾಡುತ್ತಿದ್ದೇನೆ. ಎರಡು ಪ್ರಮುಖ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು : ಈಗ ಮಂತ್ರಿಗಳು ಇಲ್ಲ. ಕೌನ್ಸಿಲ್‌ಗೆ ಹೋಗಿದ್ದಾರೆ ಎಂದು ಕಾಣುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ : ಹೋದ ಸಲವೂ ಹಾಗೆಯೇ ಆಯಿತು. ಕಳೆದ ಅಧಿವೇಶನದಲ್ಲೂ ಹಾಗೆಯೇ ಆಯಿತು. ನಿನ್ನೆ ಕೂಡ ಹಾಗೆಯೇ ಆಯಿತು. ಇಲ್ಲ ಬೇಕು ಎಂದು ಚರ್ಚೆ ಮಾಡುವುದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದರೆ ನೇರವಾಗಿ ಹೇಳಿಬಿಡಿ. ರಾಜ್ಯದ ಜನರ ತೆರಿಗೆಯ ಹಣ ಏನು ಖರ್ಚಾಗುತ್ತಿದೆ? ಈಗ ನ್ಯಾಯಾಂಗ ಇಲಾಖೆಗೆ ಏನು ಸ್ವಾಯತ್ತತೆ ಕೊಡಬೇಕು, ಅಧೀನ ನ್ಯಾಯಾಲಯಗಳು ಎಂದು ಇದೆ. ಅದನ್ನು ಚರ್ಚೆ ಮಾಡಬೇಕು ಎಂಬ ಉದ್ದೇಶ ನಮಗೆ ಇದೆ. ಸಕ್ಕರೆ ಸಹಕಾರಿ ಕಾರ್ಖಾನೆಗಳು ನಷ್ಟಕ್ಕೆ ಒಳಪಟ್ಟಿವೆ.

ಉಪಾಧ್ಯಕ್ಷರು : ಈಗ ಸದನವನ್ನು ಎರಡೂವರೆ ಗಂಟೆವರೆಗೆ ಮುಂದೂಡಲಾಗಿದೆ.

(ಸದನವು 1.52 ಕ್ಕೆ ಮುಂದೂಡಲ್ಪಟ್ಟು ಮತ್ತೆ 2.30 ಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 9 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಉಪಾಧ್ಯಕ್ಷರು ಮಾನ್ಯ ಶ್ರೀ ಎನ್.ವೈ. ಗೋಪಾಲಕೃಷ್ಣರವರು ಉಪಸ್ಥಿತರಿದ್ದರು)

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಕಂದಾಯ ಸಚಿವರು ಉತ್ತರ ಕೊಡುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಮಧ್ಯಾಹ್ನ ಊಟಕ್ಕಾಗಿ ಸದನವನ್ನು ಮುಂದೂಡುವ ಮುಂಚೆಯೇ ನನಗೆ ಮಾತನಾಡಲು ಕರೆದಿದ್ದಿರಿ. ಮಾನ್ಯ ಈಶ್ವರಪ್ಪನವರು ಪ್ರಸ್ತಾಪಿಸಬೇಕೆಂದಿದ್ದ ಕೊಳಚೆ ಪ್ರದೇಶದ ಬಗ್ಗೆ ಮಾತನಾಡಬೇಕಿತ್ತು.

ಉಪಾಧ್ಯಕ್ಷರು : ಇಲ್ಲಿ ಅಜೆಂಡಾದಲ್ಲಿ ಆರ್ಡರ್ ಪ್ರಕಾರವಾಗಿ ಈಗ ಮಾನ್ಯ ಎ.ಟಿ.ರಾಮಸ್ವಾಮಿಯವರು ಪ್ರಸ್ತಾಪ ಮಾಡಬೇಕೆಂದಿರುವ ವಿಷಯವಿದೆ. ನೀವು ಈಗ ಮಾತನಾಡುತ್ತೀರೇನು?

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುತ್ತೇನೆ. ಆದರೆ ಇಲ್ಲಿ ಮುಂದಿನ ಸಾಲಿನ ಮಂತ್ರಿಗಳ್ಯಾರೂ ಇಲ್ಲ, ಮುಂದಿನ ಸಾಲಿನಲ್ಲಿ ಅಧಿಕಾರಿಗಳ ಗ್ಯಾಲರಿಯಲ್ಲಿ ಇರಬೇಕಾದ ಅಧಿಕಾರಿಗಳೂ ಇಲ್ಲ. ನಿನ್ನೆಯ ದಿನ ಸಹಕಾರ ಇಲಾಖೆಗೆ ಸಂಬಂಧಪಟ್ಟ ಎಂಟು, ಹತ್ತು